ಇ) ಧಾರವಾಡ ಜಿಲ್ಲೆಯಲ್ಲಿರುವ ಒಟ್ಟು ಕೆ.ಎಸ್.ಆರ್.ಟಿ.ಸಿ. ಬಸ್ ಡಿಪೋಗಳೆಷ್ಟು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)–

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) 5

3508 (4543) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ)– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಒಟ್ಟು ಪೋಲಿಸ್ ಠಾಣೆಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಒಟ್ಟು ಎಷ್ಟು ಪ್ರಕರಣಗಳು ದಾಖಲಾಗಿವೆ ?

ಇ) ಇದರಲ್ಲಿ ಎಷ್ಟು ಕೇಸುಗಳು ಖುಲಾಸಗಳಾಗಿವೆ ? ಬಾಕಿ ಉಳಿದಿರುವ ಕೇಸುಗಳೆಷ್ಟು ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) –

ಅ) ಧಾರವಾಡ ಜಿಲ್ಲೆಯಲ್ಲಿರುವ ಒಟ್ಟು ಪೋಲಿಸ್ ಠಾಣೆಗಳ ಒಟ್ಟು ಸಂಖ್ಯೆ 8.

ಆ) ಒಟ್ಟು 3,404 ಪ್ರಕರಣಗಳು ದಾಖಲಾಗಿರುತ್ತವೆ.

ಇ) 480 ಪ್ರಕರಣಗಳು ಖುಲಾಸಾಗಿರುತ್ತವೆ. 2,924 ಪ್ರಕರಣಗಳು ಬಾಕಿ ಇರುತ್ತವೆ. (ಈ ಪೈಕಿ 668 ಪ್ರಕರಣಗಳು ಶಿಕ್ಷೆಯಲ್ಲಿ, 1,142 ಪ್ರಕರಣಗಳು ನ್ಯಾಯಾಲಯದ ವಿಚಾರಣೆ ಯಲ್ಲಿ, 501 ಪ್ರಕರಣಗಳು ತನಿಖೆಯಲ್ಲಿ ಮತ್ತು ಇನ್ನುಳಿದ 613 ಪ್ರಕರಣಗಳು ಇತರ ರೀತಿಯಲ್ಲಿ ವಿಲೇವಾರಿಗೊಂಡಿರುತ್ತವೆ.)

3509 (4551) ಶ್ರೀ ಆಲ್ಕೋಡ್ ಹನುಮಂತಪ್ಪ ವೈ. (ದೇವದುರ್ಗ)– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆ, ದೇವದುರ್ಗ ತಾಲ್ಲೂಕಿನಲ್ಲಿ ಬರುವ ನಾರಾಯಣಪುರ ಬಲದಂಡೆ ಕಾಲುವೆಗಳಾದ ನಂ.14 ರಿಂದ 17ರ

ವಿಭಾಗಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ (ಪ್ರದೇಶಾವಾರು, ಕಾಲುವೆಗಳ ವಿವರ ನೀಡುವುದು) ;

ಆ) ಸದರಿ ಕಾಲುವೆ, ಉಪ ಕಾಲುವೆಗಳಲ್ಲಿ ನಡೆದ ಕಾಮಗಾರಿಗಳು ಕಳಪೆ ಮಟ್ಟದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ, ಸರ್ಕಾರ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲೆ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು) ;

ಇ) ಸದರಿ ಕ್ಷೇತ್ರದಲ್ಲಿ ಬರುವ ಕಾಮಗಾರಿಗಳನ್ನು ಯಾವ ಯಾವ ವಿಭಾಗಗಳಲ್ಲಿ, ಯಾವ ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ; ಅದರ ಕಾಮಗಾರಿಯ ಒಟ್ಟು ಮೊತ್ತ ಇಲ್ಲಿಯವರೆಗೆ ಖರ್ಚಾದ ಹಾಗೂ ಉಳಿದ ಹಣವೆಷ್ಟು ; (ಗುತ್ತಿಗೆದಾರರ ಹೆಸರಿನೊಂದಿಗೆ ಹಣ ಬಿಡುಗಡೆ ಮಾಡಿರುವ ವಿವರ ನೀಡುವುದು) ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) –

ಅ) ನಾರಾಯಣಪುರ ಬಲದಂಡೆ ಕಾಲುವೆಯ ನಂ.14 ರಿಂದ 17ವರೆಗಿನ ವಿತರಣಾ ಕಾಲುವೆಗಳ ಕಾಮಗಾರಿಗಳನ್ನು ನಾ.ಬ.ದಂ.ಕಾ ವಿಭಾಗ ನಂ.6 ಅಮರಾಪುರ್ ಕ್ರಾಸ್ ಮತ್ತು ನಾ.ಬ.ದಂ.ಕಾ ವಿಭಾಗ ನಂ.7 ಚಿಕ್ಕಹೊನ್ನಕುಣಿ ವಿಭಾಗಗಳಡಿಯಲ್ಲಿ ಕೈಗೊಳ್ಳಲಾಗಿದೆ. ಕಾಲುವೆವಾರು ನೀರಾವರಿ ಪ್ರದೇಶದ ವಿವರಗಳು ಈ ಕೆಳಗಿನಂತಿದೆ: 1. ವಿತರಣಾ ಕಾಲುವೆ 14 ರ ಮೂಲಕ 1700 ಹೆ 2. ವಿತರಣಾ ಕಾಲುವೆ 15 ರ ಮೂಲಕ 14520 ಹೆ 3. ವಿತರಣಾ ಕಾಲುವೆ 16 ರ ಮೂಲಕ 22320 ಹೆ 4. ವಿತರಣಾ ಕಾಲುವೆ 17 ರ ಮೂಲಕ 8330 ಹೆ.

ಆ) ನಾರಾಯಣಪುರ ಬಲದಂಡೆ ಕಿ.ಮೀ. 95 ಹಾಗೂ ವಿತರಣಾ ಕಾಲುವೆ ಸಂಖ್ಯೆ : 9 ರಿಂದ 18 ರಡಿ ನಡೆದಿದೆ ಎನ್ನಲಾದ ಕಳಪೆಮಟ್ಟದ ಕಾಮಗಾರಿಗಳ ಕುರಿತು ಸರ್ಕಾರದ ಗಮನಕ್ಕೆ ಬಂದಿದ್ದು, ಸರ್ಕಾರ ತನಿಖೆ ಮಾಡಿ ವರದಿಯನ್ನು ಸಲ್ಲಿಸಲು ಡಿಸೆಂಬರ್ 2002ರಲ್ಲಿ ತ್ರಿಸದಸ್ಯರ ಸಮಿತಿಯನ್ನು ರಚಿಸಿತ್ತು. ಈ ಸಮಿತಿ ತನಿಖೆ ನಡೆಸಿ ಕೆಲವು ಕಾಮಗಾರಿಗಳ ನಿರ್ವಹಣೆಯಲ್ಲಿ ಕಂಡುಬಂದಂತಹ ಸಣ್ಣ ಲೋಪದೋಶಗಳನ್ನು ಹಾಗೂ ನ್ಯೂನ್ಯತೆ / ದುರಸ್ತಿ ಕೆಲಸಗಳನ್ನು ಅಂತಿಮಗೊಳಿಸುವಿಕೆ ಮುನ್ನವೇ

ಸರಿಪಡಿಸಿಕೊಳ್ಳುವಂತೆ ಅಭಿಪ್ರಾಯ ಪಟ್ಟಿರುತ್ತದೆ. ಒಟ್ಟಾರೆ ಈ ಸಮಿತಿಯು ಕಾಮಗಾರಿ ನಿರ್ವಹಣೆಯಲ್ಲಿ ಹಣ ದುರುಪಯೋಗ ಆಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.

ಇ) ವಿವರಗಳನ್ನು ಪಟ್ಟಿಯ ರೂಪದಲ್ಲಿ ಲಗತ್ತಿಸಲಾಗಿದೆ.

3510 (4552) ಶ್ರೀ ಆಲ್ಕೋಡ್ ಹನುಮಂತಪ್ಪ ವೈ. (ದೇವದುರ್ಗ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆ,ದೇವದುರ್ಗ ತಾಲ್ಲೂಕಿಗೆ ಅಗ್ನಿ ಶಾಮಕ ಠಾಣೆ ಮಂಜೂರಾಗಿರುವುದು ನಿಜವೇ; ಹಾಗಿದ್ದಲ್ಲಿ ಇದಕ್ಕೆ ಮಂಜೂರಾದ ಹಣವೆಷ್ಟು (ವಿವರ ನೀಡುವುದು);

ಆ) ಸದರಿ ಅಗ್ನಿಶಾಮಕ ಠಾಣೆ ಮಂಜೂರಾಗಿದ್ದಲ್ಲಿ, ಕಟ್ಟಡ, ಸಿಬ್ಬಂದಿ ವರ್ಗ, ವಾಹನದ ವ್ಯವಸ್ಥೆ, ಸ್ಥಳ ನೀಡಲಾಗಿದೆಯೇ; ಇದಕ್ಕೆ ಬೇಕಾಗುವ ಹಣವನ್ನು ಮಂಜೂರು ಮಾಡಲಾಗಿದೆಯೇ; ಇದಕ್ಕೆ ಬೇಕಾಗುವ ಒಟ್ಟು ಹಣ ಎಷ್ಟು; ಬೇಕಾಗುವ ಪೂರ್ಣ ಹಣವನ್ನು ಸರ್ಕಾರ ಮಂಜೂರು ಮಾಡಲು ಕ್ರಮ ಕೈಗೊಂಡಿರುವುದೇ (ವಿವರ ನೀಡುವುದು) ;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)–

ಅ) ಹೌದು. ಸರ್ಕಾರವು ಆದೇಶ ಸಂಖ್ಯೆ : ಒಇ 142 ಕಅಸೇ 2004 ದಿನಾಂಕ: 16.5.2005 ರಲ್ಲಿ ಮಂಜೂರಾತಿ ನೀಡಿರುತ್ತದೆ. ಈ ಮಂಜೂರಾದ ಅಗ್ನಿ ಶಾಮಕ ಠಾಣೆಗೆ ಅನಾವರ್ತಕ ವೆಚ್ಚವಾಗಿ ರೂ 45,12,000 ಹಾಗೂ ಆವರ್ತಕ ವೆಚ್ಚವಾಗಿ 27,48,056 ಗಳು ಮಂಜೂರಾಗಿರುತ್ತದೆ.

ಆ) ಅಗ್ನಿಶಾಮಕ ಠಾಣೆ ಹಾಗೂ ಸಿಬ್ಬಂದಿಯ ವಸತಿ ಗೃಹ,ಕವಯತು ಮೈದಾನ ಇತ್ಯಾದಿ ಗಳಿಗೆ ಸುಮಾರು 2 ಎಕರೆನಿವೇಶನ ಅವಶ್ಯಕವಾಗಿ ಬೇಕಾಗಿರುತ್ತದೆ. ಈ ಬಗ್ಗೆ ಜಿಲ್ಲಾದಿಕಾರಿ ಮತ್ತು ತಹಶೀಲ್ದಾರ್‌ರವರಿಂದ ನಿವೇಶನ ಪಡೆದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

3511(4553) ಶ್ರೀ ಆಲ್ಕೋಡ್ ಹನುಮಂತಪ್ಪ. ವೈ (ದೇವದುರ್ಗ) – ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಡಿ.ಎಫ್ ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಪಟ್ಟಣ ಪಂಚಾಯತಿಗೆ ಕಳೆದ ಮೂರು ವರ್ಷಗಳಿಂದ ಯಾವ ಯಾವ